<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು.</u>

<u>ಸೆಷನ್ಸ್ ಕೇಸ್ ನಂಬ್ರ 76/2023</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಹುಲ್ | <u>ಪ್ರಾಸಾಃ 5</u> |
| ತಂದೆಯ ಹೆಸರು | : | ದುರ್ಗೇಶ್ | <u>ಚಾಸಾಃ 4</u> |
| ಪ್ರಾಯ | : | 13 ವರ್ಷ | **<u>ದಿನಾಂಕಃ 07.02.2025</u>** |
| ಉದ್ಯೋಗ | : | 7ನೇ ತರಗತಿ ವಿದ್ಯಾರ್ಥಿ, ದ.ಕ.ಜಿ.ಪ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೊಕ್ಕಪಟ್ಣ, ಬೆಂಗ್ರೆ | |
| ವಾಸಸ್ಥಳ | : | ಬೆಂಗ್ರೆ. | |

<u>ಸಾಕ್ಷಿಯು 13 ವರ್ಷದ ಮಗು ಆಗಿದ್ದು, ಆತ ಸಾಕ್ಷ್ಯ ನುಡಿಯಲು ಸಮರ್ಥನೇ, ಇಲ್ಲವೇ ಎಂದು ಪರೀಕ್ಷಿಸಲು ಕೇಳಿದ ನ್ಯಾಯಾಲಯದ ಪ್ರಶ್ನೆಗಳು ಕೆಳಗಿನಂತಿವೆಃ</u>

ಪ್ರಶ್ನೆ 1: ನೀನು ಈ ದಿನ ಎಲ್ಲಿಗೆ ಬಂದಿದ್ದೀಯಾ?
ಉತ್ತರ: ನಾನು ಕೋರ್ಟಿಗೆ ಬಂದಿದ್ದೇನೆ.

ಪ್ರಶ್ನೆ 2: ಇಲ್ಲಿ ಕಪ್ಪು ಕೋಟು ಧರಿಸಿರುವವರು ಯಾರು?
ಉತ್ತರ: ವಕೀಲರು.

ಪ್ರಶ್ನೆ 3: ನೀನು ಇಲ್ಲಿಗೆ ಯಾಕೆ ಬಂದಿದ್ದೀಯಾ ಅಂತ ಗೊತ್ತಿದೆಯೇ?
ಉತ್ತರ: ನಾನು ಈ ದಿನ ನನ್ನ ದೊಡ್ಡಮ್ಮನ ಜೊತೆಯಲ್ಲಿ ಸಾಕ್ಷಿ ಹೇಳಲು ಕೋರ್ಟಿಗೆ ಬಂದಿದ್ದೇನೆ.

ಪ್ರಶ್ನೆ 4: ನ್ಯಾಯಾಲಯದಲ್ಲಿ ಸತ್ಯ ನುಡಿಯಬೇಕು ಎನ್ನುವ ವಿಷಯ ತಿಳಿದಿದೆಯೇ?
ಉತ್ತರಃ ತಿಳಿದಿದೆ.

ಈ ಮೇಲೆ ಕೇಳಲಾದ ಪ್ರಶ್ನೆಗಳಿಗೆ ಮಗು ನೀಡಿದ ಉತ್ತರವನ್ನು ಗಮನಿಸಿದಾಗ, ಮಗು ಸಾಕ್ಷ್ಯ ನುಡಿಯಲು ಸಮರ್ಥ ಎನ್ನುವ ಕಾರಣಕ್ಕೆ ಆತನ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಪ್ರಾ.ಸಾ.1 ನನ್ನ ತಾಯಿಯ ತಮ್ಮ. ನಾನು ನನ್ನ ದೊಡ್ಡಮ್ಮ ಮತ್ತು ಅಜ್ಜಿ ಜೊತೆಯಲ್ಲಿ ಬೆಂಗ್ರೆ ಯಲ್ಲಿ ವಾಸ ಮಾಡುತ್ತಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ತಂದೆ. ಮೃತ ಸರಿತಾ ನನ್ನ ತಾಯಿ.

2. 2022 ರಲ್ಲಿ ನಾನು ದ.ಕ.ಜಿ.ಪ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಡಗ ಎಕ್ಕಾರು ಎಂಬಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ನನ್ನ ತಂದೆ-ತಾಯಿ ಜೊತೆ ಬಡಗ ಎಕ್ಕಾರು ನಲ್ಲಿ ಇರುವ ಕೋರೆ ಬಳಿ ಶೆಡ್ಡಿನಲ್ಲಿ ವಾಸ ಮಾಡುತ್ತಿದ್ದೆನು. ನನ್ನ ತಂದೆ ಗಾರೆ ಕೆಲಸ ಮಾಡುತ್ತಿದ್ದರು, ನನ್ನ ತಾಯಿ ಮನೆ ಕೆಲಸ ಮಾಡುತ್ತಿದ್ದರು. ನಮ್ಮ ಅಪ್ಪ ಜಾಸ್ತಿ ಕುಡಿಯುತ್ತಿದ್ದರು. ನನ್ನ ಅಮ್ಮ ಒಮ್ಮೊಮ್ಮೆ ಕುಡಿಯುತ್ತಿದ್ದರು.

3. ನವೆಂಬರ್ ತಿಂಗಳು 2022ನೇ ಇಸವಿಯಲ್ಲಿ ಒಂದು ದಿನ ನನ್ನ ತಂದೆ ನನ್ನ ತಾಯಿ ಜೊತೆ ಜಗಳ ಮಾಡುತ್ತಿದ್ದರು. ಆಗ ರಾತ್ರಿ ಸಮಯ ಆಗಿತ್ತು. ಆಗ ನನ್ನ ತಾಯಿ ಹೊರಗಡೆ ಹೋದರು ಮತ್ತು ನನ್ನ ತಂದೆ ಸಹ ಆಕೆಯ ಹಿಂದೆ ಹೊರಗೆ ಹೋದರು. ಆಗ ನನ್ನ ತಂದೆ ಅಲ್ಲೇ ಇದ್ದ ಮರದ ಪಟ್ಟಿಯಿಂದ ನನ್ನ ತಾಯಿಗೆ ಹೊಡೆದಿರುತ್ತಾರೆ. ಆಗ ನನ್ನ ತಾಯಿ ಕೂಗಾಡುತ್ತಿದ್ದರು. ಆ ಸಮಯ ಕೃಷ್ಣ ಮಾಮಾ ಬಂದು ಹೊಡೆಯಬೇಡ ಅಂತ ಹೇಳಿದರು. ಸ್ವಲ್ಪ ಸಮಯದ

ನಂತರ ನನ್ನ ತಂದೆ ಮತ್ತೆ ನನ್ನ ತಾಯಿಗೆ ಹೊಡೆಯುತ್ತಿದ್ದರು. ನಾನು ಭಯ ಬಿದ್ದು ಮಲಗಿದೆ. ಬೆಳಿಗ್ಗೆ ಎದ್ದು ನೋಡುವಾಗ ನನ್ನ ಅಮ್ಮ ಏಳುತ್ತಿರಲಿಲ್ಲ, ನನ್ನ ತಂದೆ ಅಲ್ಲಿ ಇರಲಿಲ್ಲ. ನನ್ನ ತಾಯಿ ಉಸಿರಾಡುತ್ತಿರಲಿಲ್ಲ, ಹಾಗಾಗಿ ಆಕೆ ಸತ್ತು ಹೋಗಿದ್ದಾರೆ ಅಂತ ಗೊತ್ತಾಯಿತು. ನನ್ನ ತಾಯಿ ಮೈಮೇಲೆ ಚೂಡಿದಾರ ಪ್ಯಾಂಟ್ ಒಂದೇ ಇತ್ತು ಮತ್ತು ಮೈ ಎಲ್ಲಾ ಗಾಯ ಆಗಿತ್ತು, ರಕ್ತ ಬರುತ್ತಿತ್ತು. ನಂತರ ಕೃಷ್ಣ ಮಾಮಾ ಬೆಳಗ್ಗೆ ಕೆಲಸಕ್ಕೆ ಹೋಗುತ್ತಿದ್ದರು, ಅವರನ್ನು ಕರೆದು ವಿಷಯ ತಿಳಿಸಿದೆ, ಅವರು ಪೊಲೀಸರಿಗೆ ವಿಷಯ ತಿಳಿಸಿರುತ್ತಾರೆ. ನಾನು ಪೊಲೀಸರು ವಿಚಾರಿಸಿದಾಗ ಹೇಳಿಕೆ ಕೊಟ್ಟಿರುತ್ತೇನೆ.

4. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಅವರು ನನ್ನ ತಂದೆ ಎಂದು ಗುರುತಿಸುತ್ತಾರೆ. ಈಗ ನೋಡುತ್ತಿರುವ ಫೋಟೋ ನಿ.ಪಿ.3ನ್ನು ನೋಡಿ ಸಾಕ್ಷಿ, ಈ ಸ್ಥಳ ನಮ್ಮ ಶೆಡ್ಡಿನ ಪಕ್ಕದ ಸ್ಥಳ ಮತ್ತು ಸದ್ರಿ ಶೆಡ್ಡಿನ ಪಕ್ಕದಲ್ಲಿ ನನ್ನ ತಂದೆಯವರು ನನ್ನ ತಾಯಿಗೆ ಹೊಡೆದ ಸ್ಥಳ ಎಂದು ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ-</u>**

5. ನನ್ನ ತಂದೆ-ತಾಯಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ, ಗಲಾಟೆ ಮಾಡಿಕೊಳ್ಳುತ್ತಿರಲಿಲ್ಲ. ತಂದೆ ನನಗೆ ಯಾವುದೇ ಖರ್ಚು ಕೊಡುತ್ತಿರಲಿಲ್ಲ, ನನ್ನ ತಾಯಿ ಖರ್ಚು ನೋಡಿಕೊಳ್ಳುತ್ತಿದ್ದರು.

6. ನಮ್ಮ ಮನೆ ಎತ್ತರದಲ್ಲಿದೆ ಮತ್ತು ಮುಂದಕ್ಕೆ ತಗ್ಗು ಪ್ರದೇಶವಿದೆ ಎಂದರೆ ಸರಿ. ಘಟನೆಯ ದಿನ ನನ್ನ ತಂದೆ ನನ್ನ ತಾಯಿಗೆ ಯಾವುದೇ ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ತಾಯಿ ಕುಡಿದು, ಅಮಲಿನಲ್ಲಿ ತಗ್ಗು ಪ್ರದೇಶದಲ್ಲಿ ಬಿದ್ದು, ಗಾಯವಾಗಿ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರಾ.ಸಾ.4 ಮತ್ತು ನನ್ನ ತಂದೆ ಕುಡಿದು ಯಾವಾಗಲೂ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ ನನ್ನ ತಂದೆ ಯಾವುದೇ ಗಲಾಟೆ ಮಾಡಿರಲಿಲ್ಲ ಮತ್ತು ನನ್ನ ತಾಯಿ ಗುಂಡಿಗೆ ಬಿದ್ದು ಆ ರೀತಿ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಚಾ.ಸಾ.3 ಮತ್ತು ಪ್ರಾ.ಸಾ.4ರವರು ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬೇಕು ಎಂದು ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಸಾಕ್ಷ್ಯ ನುಡಿದಂತೆ ಯಾವುದೇ ಘಟನೆ ನಡೆದಿಲ್ಲ ಮತ್ತು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.